**<u>ಸಾಕ್ಷಿಯನ್ನು ದಿನಾಂಕಃ 01-04-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ವಕೀಲರವರಿಂದಃ</u>**

4. ದಾವಾ ಅಸ್ತಿಯನ್ನು ಹೊರತು ಪಡಿಸಿ ನನ್ನ ತಂದೆ ಹೆಸರಿಗೆ ಬೇರೆ ಯಾವುದೇ ಅಸ್ತಿ ಇರುವುದಿಲ್ಲ. ನನ್ನ ತಮ್ಮನಾದ ಹನುಮಂತಪ್ಪ ವಾಸ ಇರುವ ಮನೆ ನನ್ನ ತಂದೆಯ ಹೆಸರಿನಲ್ಲಿರುವುದು ಅಂದರೆ ಸರಿ. ಗುರುಬಸವರಾಜಗೌಡ ಇವರು ನಮ್ಮ ವಿರುದ್ದ ದಾವಾ ನಂ 153/2017 ರಂತೆ ನಿರ್ದಿಷ್ಟ ಕರಾರು ನೆರವೇರಿಕೆ ದಾವೆಯನ್ನು ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಸಲ್ಲಿಸಿರುವರು ಅಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನಂದ್ಯಾಲ ಮಂಜಪ್ಪ ಕೂಡ OS No. 83/2016 ರಂತೆ ನಮ್ಮ ವಿರುದ್ಧ ದಾವೆಯನ್ನು ಸಲ್ಲಿಸಿರುವರು ಅಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ಹೆಸರು ಬೀಮವ್ವ ಎಂದು ಇರುವುದು. ಅವರು ಸಾಯುವ ಒಂದು ವರ್ಷ ಮೊದಲು ಕಾಲು ಮುರಿದು ಮನೆಯಲ್ಲಿದ್ದರು ಅಂದರೆ ಸರಿ. ಆಕೆಗೆ ಚಿಕಿತ್ಸೆ ಕೊಡಿಸಲು ಮತ್ತು ಮಕ್ಕಳಾಗದೇ ಇರುವ ಕಾರಣಕ್ಕೆ ಚಿಕಿತ್ಸೆ ಪಡೆಯಲು ಸಾಕಷ್ಟು ಹಣವನ್ನು ನನ್ನ ತಮ್ಮ ವ್ಯಯ ಮಾಡಿದ್ದನು ಅಂದರೆ ಸರಿಯಲ್ಲ. ಆ ಕಾರಣಕ್ಕೆ ಆತನು ಸಾಕಷ್ಟು ಸಾಲವನ್ನು ಪಡೆದಿದ್ದನು ಅಂದರೆ ಸರಿಯಲ್ಲ.

5. ಸಾಲ ವಸೂಲಾತಿ ಸಂಬಂದ 5 ನೇ ಪ್ರತಿವಾದಿ ನನ್ನ ತಮ್ಮನ ವಿರುದ್ಧ ದಾವೆಯನ್ನು ದಾಖಲು ಮಾಡಿದರು ಅಂದರೆ ಸರಿಯಲ್ಲ ಸದರಿ ದಾವೆ ಡಿಕ್ರಿ ಅಗಿರುತ್ತದೆ ಅಂದರೆ ಸರಿಯಲ್ಲ. ಸದರಿ ಡಿಕ್ರಿಯ ಅಧಾರದ ಮೇಲೆ ಅಮಲು ಜಾರಿಯನ್ನು ಹಾಕಿರುವರು ಅಂದರೆ ಸರಿಯಲ್ಲ. ಕುಟುಂಬದ ಸಾಲವನ್ನು ತೀರಿಸಲು ನನ್ನ ತಮ್ಮ

ಕರಾರು ಒಪ್ಪಂದವನ್ನು ಬರೆದುಕೊಟ್ಟಿರುವರು ಅಂದರೆ ಸರಿಯಲ್ಲ. ಆದ್ದರಿಂದ ನನಗೆ ದಾವಾ ಅಸ್ತಿಯಲು ಪಾಲು ಕೇಳಲು ಹಕ್ಕು ಅಧಿಕಾರ ಇರುವುದಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

01-04-2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 01.04.2026